**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.**

**ಸತ್ರ ಪ್ರಕರಣ ಸಂಖ್ಯೆಃ 46/2023**

ದಿನಾಂಕಃ 07.01.2025
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ದೋ.ಪ. -2 ಅ.ಸಾ -3

| | | |
|---|---|---|
| ಹೆಸರು | ಃ | ಶ್ರೀಮತಿ. ಗಾಯತ್ರಿ |
| ಗಂಡನ ಹೆಸರು | ಃ | ರೇಣುಕ ಆರಾಧ್ಯ |
| ವಯಸ್ಸು | ಃ | 60 ವರ್ಷ |
| ಉದ್ಯೋಗ | ಃ | ಗೃಹಿಣಿ |
| ವಾಸಸ್ಥಳ | ಃ | ನುನ್ನೂರು |

**ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ನನ್ನ ಗಂಡ ರೇಣುಕ ಆರಾಧ್ಯ ಅನಾರೋಗ್ಯದಿಂದ ಮೃತರಾಗಿದ್ದು ನನಗೆ ಆಶಾ ಮತ್ತು ಶಿವು ಎನ್ನುವ ಎರಡು ಜನ ಮಕ್ಕಳು ಇರುತ್ತಾರೆ. ನನ್ನ ಮಗಳನ್ನು ಮೈಸೂರಿನ ಕುಮಾರ್ ಎನ್ನುವವರಿಗೆ ಮದುವೆ ಮಾಡಿಕೊಟ್ಟಿರುತ್ತದೆ. ನನ್ನ ಮಗನಿಗೆ ಮದುವೆ ಆಗಿರುವುದಿಲ್ಲ. ನನ್ನ ಮಗ ಮತ್ತು ನಾನು ಒಟ್ಟಿಗೆ ನುನ್ನೂರು ಗ್ರಾಮದಲ್ಲಿ ವಾಸ ಆಗಿದ್ದೇವೆ. ನನ್ನ ಮಗನಿಗೆ ಯಾರೋ ಕೊಲೆ ಮಾಡಿರುತ್ತಾರೆ. ಸುಮಾರು ಎರಡು ವರ್ಷದ ಹಿಂದೆ ರಾತ್ರಿ ಸುಮಾರು 11.00 ಗಂಟೆ ಸಮಯಕ್ಕೆ ನಮ್ಮ ಊರಿನಲ್ಲಿ ನನ್ನ ಮಗನ ಕೊಲೆ ಆಗಿರುತ್ತದೆ. ನನ್ನ ಮಗ ಮನೆಯಿಂದ ಹೊರಗಡೆ ಇದ್ದು ಯಾರೋ ಗಾಡಿಯಲ್ಲಿ ಬಂದು ಅವನಿಗೆ ಹೊಡೆದು ಗಾಡಿಯಲ್ಲಿ ಕರೆದುಕೊಂಡು ಹೋಗಿರುತ್ತಾರೆ. ನಾನು ಈ ವಿಚಾರವನ್ನು ನನ್ನ ಮಗಳಿಗೆ ಹೇಳಿದ್ದು, ನನ್ನ ಮಗಳು ಹೊಯ್ಸಳದವರಿಗೆ ತಿಳಿಸಿದ್ದು ಅವರು ನಮ್ಮ ಮನೆ ಬಳಿ ರಾತ್ರಿ 11.00 ಗಂಟೆ ಸುಮಾರಿಗೆ ಬಂದಿದ್ದರು.

ಹೊಯ್ಸಳದವರಿಗೆ ಮಗನಿಗೆ ಯಾರೋ ಹೊಡೆದು ಕರೆದುಕೊಂಡು ಹೋದ ಬಗ್ಗೆ ಹೇಳಿದ್ದು ಅವರು ಏನು ಹೇಳಲಿಲ್ಲ. ಮರುದಿನ ಬೆಳಿಗ್ಗೆ ನನ್ನ ಮಗನನ್ನು ಹೊಡೆದು ಎಲ್ಲಿಯೋ ಬಿಸಾಕಿರುತ್ತಾರೆಂದು ನನಗೆ ಗೊತ್ತಾಯಿತು. ನಾನು ಮಗನನ್ನು ಬಿಸಾಕಿದ ಸ್ಥಳಕ್ಕೆ ಹೋಗಿರುವುದಿಲ್ಲ. ನಾನು ಮಗನಿಗೆ ಯಾರು ಯಾವ ವಿಷಯಕ್ಕೆ ಹೊಡೆದಿರುತ್ತಾರೆಂದು ತಿಳಿದುಕೊಂಡಿರುವುದಿಲ್ಲ. ನಾನು ಮಗನಿಗೆ ಯಾರು ಯಾವ ವಿಷಯಕ್ಕೆ ಹೊಡೆದಿರುತ್ತಾರೆಂದು ಪೋಲಿಸರಿಗೆ ಹೇಳಿರುವುದಿಲ್ಲ. ನ್ಯಾಯಾಲಯದಲ್ಲಿ ಇರುವ ಮೂರು ಜನ ಆರೋಪಿಗಳನ್ನು ನಾನು ನೋಡಿರುವುದಿಲ್ಲ. ನಾನು ಆರೋಪಿಗಳಿಗೂ ನನ್ನ ಮಗನ ಸಾವಿಗೂ ಸಂಬಂಧ ಇದೆ ಎಂದು ಪೋಲಿಸರ ಮುಂದೆ ಹೇಳಿಕೆ ನೀಡಿಲ್ಲ. ಮಗನ ಸಾವು ಕುರಿತು ಬೇರೆ ಏನು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಅಭಿಯೋಜಕರು ಕೋರಿರುತ್ತಾರೆ. ವಾದ ಆಲಿಸಿರುತ್ತದೆ. ಪ್ರಕರಣದ ಕಡತವನ್ನು ಪರಿಶೀಲಿಸಿದ್ದು ಸಾಕ್ಷಿ ತನ್ನ ದಿನಾಂಕ 30.10.2022 ರ ಹೇಳಿಕೆ ಪ್ರಕಾರ ಸಾಕ್ಷ್ಯ ಹೇಳದೇ ಇರುವುದು ಕಂಡುಬಂದಿದ್ದು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ)

**<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**

ನನ್ನ ಮಗ ಆರೋಪಿ-1 ರವರ ಅಪ್ರಾಪ್ತ ಮಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾನೆಂದು ಮದ್ದೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಅದರಲ್ಲಿ ನನ್ನ ಮಗ ಜೈಲಿಗೆ ಕೂಡ ಹೋಗಿದ್ದ ಎನ್ನುವುದು ಸರಿ ಇದೆ. ನಂತರ ನನ್ನ ಮಗನಿಗೆ ಜಾಮೀನು ಸಿಕ್ಕಿದ್ದು

ಊರಿನಲ್ಲಿ ಇದ್ದಾರೆ ತೊಂದರೆ ಆಗುತ್ತದೆ ಎಂದು ನನ್ನ ಮಗಳು ಮತ್ತು ಅಳಿಯ ಮಗನಿಗೆ ಬೆಂಗಳೂರಿನಲ್ಲಿ ಕೆಲಸ ಕೊಡಿಸಿದ್ದರು ಎನ್ನುವುದು ಸರಿ ಇದೆ. ಮಗ ಆಗಾಗ ಬೆಂಗಳೂರಿನಿಂದ ಮನೆಗೆ ಬಂದು ಹೋಗುವುದು ಮಾಡುತ್ತಿದ್ದ ಎನ್ನುವುದು ಸರಿ ಇದೆ. ಆರೋಪಿ-1 ಮತ್ತು ಆತನ ಭಾವ ಮೈದುನ ಆರೋಪಿ-2 ಲೈಂಗಿಕ ದೌರ್ಜನ್ಯ ಎಸಗಿರುವ ಕುರಿತು ನಿನ್ನನ್ನು ಸುಮ್ಮನೆ ಬಿಡುವುದಿಲ್ಲ ಎಂದು ಮಗನಿಗೆ ಬೆದರಿಸುತ್ತಿದ್ದರು ಎನ್ನುವುದು ಸರಿ ಅಲ್ಲ.

ನನ್ನ ಮಗ ಸಾಯುವುದಕ್ಕೆ ಹತ್ತು ದಿನ ಮೊದಲು ಊರಿಗೆ ಬಂದಿದ್ದ ಎನ್ನುವುದು ಸರಿ ಇದೆ. ದಿನಾಂಕ 26.10.2022 ರಂದು ನನ್ನ ಮಗ ಊರಿಗೆ ಬಂದಿದ್ದಾಗ ಆರೋಪಿ-1 ನನ್ನ ಮಗನ ಜೊತೆ ಜಗಳ ಮಾಡಿದ್ದರು ಎನ್ನುವುದು ಸರಿ ಅಲ್ಲ. ಆ ದಿನ ಕೂಡ ಆರೋಪಿ-1 ನನ್ನ ಮಗನಿಗೆ ಸುಮ್ಮನೆ ಬಿಡುವುದಿಲ್ಲ ಒಂದು ಗತಿ ಕಾಣಿಸುತ್ತೇನೆ ಎಂದು ಹೇಳಿದ್ದರು ಎನ್ನುವುದು ಸರಿ ಅಲ್ಲ. ದಿನಾಂಕ 28.10.2022 ರಂದು ಮಧ್ಯಾಹ್ನ 1.00 ಗಂಟೆ ಸಮಯಕ್ಕೆ ನಾನು ಮನೆಯಲ್ಲಿ ಇರುವಾಗ ಆರೋಪಿ-1 ನನ್ನ ಮಗನ ಮೇಲೆ ಜಗಳ ತೆಗೆದು ಇಷ್ಟರಲ್ಲಿಯೇ ಒಂದು ಗತಿ ಕಾಣಿಸುತ್ತೇನೆಂದು ಹೇಳಿರುತ್ತಾರೆ ಎನ್ನುವುದು ಸರಿ ಅಲ್ಲ. ನಾನು ಈ ವಿಚಾರವನ್ನು ನನ್ನ ಮಗಳು ಮತ್ತು ಅಳಿಯನಿಗೆ ಹೇಳಿದಾಗ ಅವರು ಕೇಸ್ ಮುಗಿಯುವ ತನಕ ಯಾರ ತಂಟೆಗೂ ಹೋಗಬೇಡ ಸುಮ್ಮನೆ ಇದ್ದು ಬಿಡು ಎಂದು ಹೇಳಿರುವುದು ಎನ್ನುವುದು ಸರಿ ಇದೆ. ದಿನಾಂಕ 28.10.2022 ರ ರಾತ್ರಿ 11.00 ಗಂಟೆ ಸಮಯಕ್ಕೆ ಆರೋಪಿ-1

ರವರು ಆರೋಪಿ-2 ಮತ್ತು 3 ರವರ ಜೊತೆ ಮೋಟಾರ್ ಸೈಕಲ್ ನಲ್ಲಿ ನಮ್ಮ ಮನೆ ಬಳಿ ಬಂದಿದ್ದರು ಎನ್ನುವುದು ಸರಿ ಅಲ್ಲ.

ಆರೋಪಿ-1 ನನ್ನ ಮಗನನ್ನು ಮನೆಯಿಂದ ಹೊರಗೆ ಕರೆದು ಏಕಾಏಕಿ ಎರಡು ಕೈಗಳನ್ನು ಬಿಗಿಯಾಗಿ ಹಿಡಿದುಕೊಂಡಿದ್ದು ಆರೋಪಿ-2 ಮತ್ತು 3 ಕೈಗಳಲಿದ್ದ ದೊಣ್ಣೆಗಳಿಂದ ನನ್ನ ಮಗನ ತಲೆ ಮೈ ಕೈಗೆ ಹೊಡೆದರು ಎನ್ನುವುದು ಸರಿ ಅಲ್ಲ. ಆರೋಪಿ-2 ಮತ್ತು 3 ತಾವು ತಂದಿದ್ದ ಮೋಟಾರ್ ಸೈಕಲ್ ನ ಮದ್ಯ ನನ್ನ ಮಗನನ್ನು ಕೂರಿಸಿಕೊಂಡು ಹೋದರು ಎನ್ನುವುದು ಸರಿ ಅಲ್ಲ. ನನ್ನ ಮಗ ಹೋಗುವಾಗ ಕೇವಲ ಪ್ಯಾಂಟ್ ಮಾತ್ರ ಹಾಕಿಕೊಂಡಿದ್ದು ಶರ್ಟ್ ಹಾಕಿಕೊಂಡಿರಲಿಲ್ಲ ಎನ್ನುವುದು ಸರಿ ಇದೆ. ತಕ್ಷಣ ವಿಷಯವನ್ನು ಮಗಳು ಮತ್ತು ಅಳಿಯನಿಗೆ ತಿಳಿಸಿದೆ ಎನ್ನುವುದು ಸರಿ ಇದೆ. ಸಾಕ್ಷಿ ಮುಂದು ವರೆದು ಯಾರೋ ಕರೆದುಕೊಂಡು ಹೋಗಿರುತ್ತಾರೆಂದು ಹೇಳಿರುತ್ತೇನೆ.

ನನ್ನ ಮಗಳು ಮತ್ತು ಅಳಿಯ ಪೋಲಿಸ್ ಕಂಟ್ರೋಲ್ ರೂಮ್ ಗೆ ಕರೆ ಮಾಡಿದ್ದು ರಾತ್ರಿ ಸುಮಾರು 2.30 ರ ಸಮಯಕ್ಕೆ ಪೋಲಿಸರು ನಮ್ಮ ಮನೆ ಬಳಿ ಬಂದಿದ್ದರು ಎನ್ನುವುದು ಸರಿ ಇದೆ. ಪೋಲಿಸರು ಬಂದಾಗ ಆರೋಪಿ-1 ನಮ್ಮ ಮನೆ ಬಳಿ ಇದ್ದು ಆರೋಪಿ-2 ಮತ್ತು 3 ತಪ್ಪಿಸಿಕೊಂಡು ಹೋಗಿದ್ದರು ಎನ್ನುವುದು ಸರಿ ಅಲ್ಲ. ಆರೋಪಿ-1 ರವರಿಗೆ ಪೋಲಿಸರು ನನ್ನ ಮಗನನ್ನು ಕರೆಸುವಂತೆ ಹೇಳಿದ್ದು ಆರೋಪಿ-1 ಕರೆ ಮಾಡಿ ಕರೆಸುವುದಾಗಿ ಹೇಳಿದ್ದರು ಎನ್ನುವುದು ಸರಿ ಅಲ್ಲ. ಪೊಲೀಸರು ಗಲಾಟೆ ಮಾಡಿಕೊಳ್ಳದಂತೆ ಎಚ್ಚರಿಗೆ ಕೊಟ್ಟು ಹೋಗಿದ್ದರು

ಎನ್ನುವುದು ಸರಿ ಅಲ್ಲ. ದಿನಾಂಕ 29.10.2022 ರ ಬೆಳಿಗ್ಗೆ 6.30 ರ ಸಮಯಕ್ಕೆ ನಮ್ಮ ಊರಿನವರು ನಮ್ಮ ಮನೆ ಬಳಿ ಬಂದು ನನ್ನ ಮಗನನ್ನು ಕೊಲೆ ಮಾಡಿ ನೆರಳೂರು ಗ್ರಾಮದ ತಮ್ಮಣ್ಣ ರವರ ಜಾಮೀನು ಬಳಿ ಹಾಕಿದ್ದಾಗಿ ಹೇಳಿದ್ದು ನಾನು, ನನ್ನ ಮಗಳು ಮತ್ತು ಅಳಿಯ ಮತ್ತು ಇತರರು ಸ್ಥಳಕ್ಕೆ ಹೋಗಿ ನೋಡಿದಾಗ ಯಾವುದೋ ಆಯುಧದಿಂದ ನನ್ನ ಮಗನನ್ನು ಕೊಲೆ ಮಾಡಿ ಅಲ್ಲಿ ತಂದು ಹಾಕಿದ್ದು ಆತನ ಮೈ ಮೇಲೆ ಪ್ಯಾಂಟ್ ಬಿಟ್ಟು ಬೇರೆ ಬಟ್ಟೆ ಇರಲಿಲ್ಲ ಎನ್ನುವುದು ಸರಿ ಅಲ್ಲ.

ಪೋಲಿಸರ ಮುಂದೆ ನಾನು ನನ್ನ ಮಗನನ್ನು ಆರೋಪಿಗಳು ದ್ವೇಷ ಸಾಧಿಸಿ ಪೋಲಿಸರು ಹೋದ ನಂತರ ಕೊಲೆ ಮಾಡಿ ತಮ್ಮಣ್ಣನ ಜಾಮೀನಿನಲ್ಲಿ ಹಾಕಿರುತ್ತಾರೆಂದು ಪೋಲಿಸರ ಮುಂದೆ ಹೇಳಿರುತ್ತೇನೆ ಎನ್ನುವುದು ಸರಿ ಅಲ್ಲ. ದಿನಾಂಕ 30.10.2022 ರಂದು ನಮ್ಮ ಮನೆಯ ಬಳಿ ಆರೋಪಿ-2 ಮತ್ತು 3 ರವರನ್ನು ಪೊಲೀಸರು ಕರೆದುಕೊಂಡು ಬಂದಿದ್ದು ಅವರನ್ನು ನೋಡಿ ಗುರುತಿಸಿರುತ್ತೇನೆ ಎನ್ನುವುದು ಸರಿ ಅಲ್ಲ. ಆರೋಪಿಗಳೆಲ್ಲಾ ಕೊಲೆ ಮಾಡಿದ ನಂತರ ತಲೆ ಮರಸಿಕೊಂಡಿದ್ದು ಈ ಸಂಗತಿಯನ್ನು ಕೂಡ ಪೋಲಿಸರ ಮುಂದೆ ಹೇಳಿರುತ್ತೇನೆ ಎನ್ನುವುದು ಸರಿ ಅಲ್ಲ. ಈಗ ರಾಜಿ ಮಾಡಿಕೊಂಡಿರುತ್ತೇವೆ ಎನ್ನುವುದು ಸರಿ ಅಲ್ಲ. ದಿನಾಂಕ 30.10.2022 ರಂದು ನಾನು ಮೇಲೆ ಸೂಚಿಸಿದಂತೆ ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎನ್ನುವುದು ಸರಿ ಅಲ್ಲ. ಹೇಳಿಕೆಯನ್ನು **ನಿಪಿ-4** ಎಂದು ಗುರುತಿಸಲಾಯಿತು. ಆರೋಪಿಗಳು

ಉದ್ದೇಶ ಪೂರ್ವಕವಾಗಿ ನನ್ನ ಮಗನನ್ನು ಕೊಲೆ ಮಾಡಿದ್ದರು ರಾಜಿ ಮಾಡಿಕೊಂಡು ಅವರನ್ನು ಶಿಕ್ಷೆ ಯಿಂದ ತಪ್ಪಿಸಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿ ಅಲ್ಲ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ರಾಘವೇಂದ್ರ. ಜಿ)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.